

# ಮ್ಯೂಸಿಯಂ ಮನೆ!

ಪುರಾತನ ಹಾಗೂ ಕಲಾತ್ಮಕ ವಸ್ತುಗಳ ಸಂಗ್ರಹ ಹೊಂದಿರುವ ಬೆಂಗಳೂರಿನ ಮುರಳಿ–ಮೌನ ದಂಪತಿಯ ಮನೆಯ ಪ್ರತಿ ಜಾಗದಲ್ಲೂ ಅಚ್ಚರಿಯೊಂದು ಇಣುಕುತ್ತದೆ. ಪ್ರಾಚೀನ ವಸ್ತುಗಳ ಸಂಗ್ರಹದ ಜೊತೆಗೆ ಈ ದಂಪತಿ ಬೆಳೆಸಿಕೊಂಡಿರುವ ಹಸಿರು ಪ್ರೀತಿ ಮನ ಸೆಳೆಯುತ್ತದೆ.

■ ಸುಮಲತಾ ಎನ್.

ಚಿತ್ರಗಳು: ರಂಜು ಪಿ.

ತಾತ, ಮುತ್ತಾತರ ಜಮಾನದ ವಸ್ತುಗಳನ್ನಿಟ್ಟುಕೊಂಡು ಏನು ಮಾಡುವುದೆಂದು ಅಟ್ಟಕ್ಕೆ ಬಿಸಾಡುವ, ಇಲ್ಲವೇ ಗುಜರಿಗೆ ಹಾಕಿ ಕೈ ತೊಳೆದುಕೊಳ್ಳುವ ಮಂದಿಯೇ ಹೆಚ್ಚು. ಆದರೆ ಇಂಥ ಪುರಾತನ ಕಾಲದ ವಸ್ತುಗಳಿಂದಲೇ ಮನೆಗೆ ಮೆರುಗು ತುಂಬಿಕೊಂಡವರು ಬೈಮನ ಮುರಳಿ ದಂಪತಿ. ಆಧುನಿಕ ಜೀವನ ಶೈಲಿಯನ್ನು ಹಾಸು ಹೊದ್ದಿರುವ ಬೆಂಗಳೂರಿನಲ್ಲಿ, ಮುರಳಿ ಅವರ ಮನೆ ಹೊಕ್ಕರೆ ಹಳೆಯ ಕಾಲಕ್ಕೊಮ್ಮೆ ಕಾಲಿಟ್ಟು ಬಂದ ಅನುಭವವಾಗುತ್ತದೆ.

ಒಂದೇ ನೋಟದಲ್ಲಿ ಗಮನ ಸೆಳೆಯುವಂತಿರುವ ಇವರ 'ನಮ್ಮನೆ' ಒಳಗೆ ಹೋಗುತ್ತಿದ್ದಂತೆ ಆಸಕ್ತಿಕರ ವಸ್ತುಗಳ ಸಂಗ್ರಹಾಲಯವೇ ತೆರೆದುಕೊಳ್ಳುತ್ತದೆ. ಮನೆಯಲ್ಲಿ ಒಪ್ಪವಾಗಿ ಜೋಡಿಸಿರುವ ಹಲವು ಪ್ರಾಚೀನ ಹಾಗೂ ಕಲಾತ್ಮಕ ವಸ್ತುಗಳು ಪುರಾತನ ಚಿತ್ರಣವನ್ನು ಬಿಡಿಸಿಟ್ಟಂತೆ ಕಾಣುತ್ತವೆ.

ಮುರಳಿ ಹಾಗೂ ಮೌನ ದಂಪತಿಯ ಮನೆಯಿರುವುದು ಬೆಂಗಳೂರಿನ ಜಕ್ಕೂರು ಸಮೀಪದ ಡಾ. ಶಿವರಾಮ ಕಾರಂತ ನಗರದಲ್ಲಿ. 8 ವರ್ಷಗಳ ಹಿಂದೆ ಕಟ್ಟಿದ ಈ ಮನೆಯನ್ನು ಹೀಗೊಂದು ಪುಟ್ಟ ಸಂಗ್ರಹಾಲಯದಂತೆ



'ನಮ್ಮನೆ'ಯ ರೂವಾರಿಗಳು ಮುರಳಿ, ಮೌನ

ರೂಪಿಸುವ ಆಲೋಚನೆಗೆ ಈ ದಂಪತಿಯ ಅಭಿರುಚಿಯೇ ಅಡಿಪಾಯ.

ಮನೆಯೊಳಗೆ ಕಾಲಿಡುತ್ತಿದ್ದಂತೆ, ಇಂಗ್ಲಿಷ್ ಸಿನಿಮಾಗಳಲ್ಲಿ ಕಂಡುಬರುತ್ತಿದ್ದ ರೆಟ್ರೊ ಫೋನೊಂದು ಸ್ವಾಗತ ಕೋರುತ್ತದೆ. ಪುಟ್ಟ ಮೇಜಿನಲ್ಲಿ ಜೋಡಿಸಿಟ್ಟ ಹಿತ್ತಾಳೆ, ಕಂಚಿನ ಸಾಮಾನುಗಳು ಒಂದೇ ಕ್ಷಣದಲ್ಲಿ ನಿಮ್ಮ ಚಿತ್ತ ಗೆದ್ದಿರುತ್ತವೆ. ಮೂಲೆಯಲ್ಲಿ, ದೊಡ್ಡ ಕಂಚಿನ ಉರುಳಿಯಲ್ಲಿ ಕೂತ ಬೋನ್ಸಾಯ್ ಗಿಡ ನಕ್ಕಂತೆ ಚಕಿತಗೊಳಿಸುತ್ತದೆ. ಅರೆ, ಕಾಡಿನಲ್ಲಿ ಎಲ್ಲೋ ಬಿದ್ದಿದ್ದ ಅಣಬೆಗೂ ಕನ್ನಡಿ ಮೇಲೆ ಜಾಗ! ಅಚ್ಚರಿಯ ಕಣ್ಣುಗಳಿಂದ ನೋಡುತ್ತಿರುವಾಗಲೇ, ಮೀನಿಗೆ ಗಾಳ ಹಾಕುವ ಮನುಷ್ಯನ ಗೊಂಬೆಯೊಂದು ಕರೆದಂತೆ ಭಾಸವಾಗುತ್ತದೆ.

ಮನೆಯ ಕೆಳ ಮಹಡಿಯ ಮೆಟ್ಟಿಲುಗಳ ಮೇಲೆ ಸಾಲಾಗಿ ಜೋಡಿಸಿಟ್ಟ ಪುಟ್ಟ ಪುಟ್ಟ ಸಾಮಾನುಗಳು ಹಳೆಯ ಕಥೆಯೊಂದನ್ನು ಹೇಳುವಂತಿವೆ. ಆಗಿನ ಕಾಲದಲ್ಲಿ ಹಾಲು ಕರೆದು ಶೇಖರಿಸಿಡುತ್ತಿದ್ದ ಅಳತೆ ಬಟ್ಟಲುಗಳು, ಎಣ್ಣೆ ಕಾಯಿಸುತ್ತಿದ್ದ ಹಿತ್ತಾಳೆ ಬಟ್ಟಲು, ಥರಾವರಿ ದೀಪಗಳು, ಇಸ್ತ್ರಿ ಪೆಟ್ಟಿಗೆಗಳು, ಲಾಂದ್ರ, ತೀರ್ಥದ ಪಾತ್ರೆಗಳು, ಕಾಸು ಕೂಡಿಡುತ್ತಿದ್ದ ತಾಮ್ರದ